**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.748/2017 ಪ್ರಾ.ಸಾ -- 6 ಚಾ.ಸಾ – 13**

**ದಿನಾಂಕ: 10-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಜಿ. ಕೃಷ್ಣರಾಜು |
| ತಂದೆಯ ಹೆಸರು | : | ಜಿ. ಎಸ್ ಗಿಡ್ಡೇಗೌಡ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಪಿ. ಐ.<br>ಶನಿವಾರ ಸಂತೆ , ಕೊಡಗು, |
| ವಾಸಸ್ಥಳ | : | ಕೊಡಗು |

**ಮುಖ್ಯ ವಿಚಾರಣೆ : ಮಾನ್ಯ ಎಪಿಪಿ ರವರಿಂದ**

ನಾನು ದಿನಾಂಕಃ 14-03-2017 ರಿಂದ ದಿಃ 10-07-2019 ರ ವರೆಗೆ ತಿಪಟೂರು ಗ್ರಾಮಾಂತರ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ20-03-2017 ರಂದು ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಮಂದಿನ ತನಿಖೆಗೆ ಪಡೆದುಕೊಂಡಿರುತ್ತೇನೆ. ನಂತರ ಕೃತ್ಯ ನೆಡೆದ ಸ್ಥಳಕ್ಕೆ ಚಾಸಾ-1 ರವರನ್ನು ಬರಮಾಡಿಕೊಂಡು ಪಂಚರುಗಳಾದ ಚಾಸಾ- 2 ಮತ್ತು 4 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿ ಸ್ಥಳದಲ್ಲೆ ಪಂಚನಾಮಯನ್ನು ತಯಾರು ಮಾಡಿ ಪಂಚರ ಸಹಿಗಳನ್ನು ಪಡೆದಿರುತ್ತೇನೆ.

ಆರೋಪಿತರ ಪತ್ತೆಗಾಗಿ ಚಾಸಾ-12 ರವರನ್ನು ನೇಮಕ ಮಾಡಿರುತ್ತೇನೆ. ಸದರಿಯವರು ದಿನಾಂಕ 24-03-2017 ರಂದು ಠಾಣಾ ಸಿಬ್ಬಂದಿಯವರಾದ ಚಾಸಾ-8 ರಿಂದ 11 ರವರೊಂದಿಗೆ ಅನುಮಾನಸ್ಪದವಾಗಿ ಕಂಡು ಬಂದ 4 ಜನ ವ್ಯಕ್ತಿಗಳನ್ನು ಹಾಗೂ ಒಂದು ಇಂಡಿಕಾ ಕಾರನ್ನು ವಶಕ್ಕೆ ಪಡೆದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಆಸಾಮಿಗಳನ್ನು

ಕೂಲಂಕುಷವಾಗಿ ವಿಚಾರ ಮಾಡಲಾಗಿ ಸದರಿ ವ್ಯಕ್ತಿಗಳ ಹೆಸರು ಮಹೇಶ್ , ಶಶಿಭೂಷಣ್, ಗೋಪಾಲ್ ಮತ್ತು ನರಸಿಂಹ ಎಂದು ತಿಳಿಸಿರುತ್ತಾರೆ. ಇವರುಗಳು 4-5 ದಿನಗಳ ಹಿಂದೆ ಕೆ. ಬಿ.ಕ್ರಾಸ್ ನಿಂದ ಚಿಕ್ಕನಾಯಕನಹಳ್ಳಿಗೆ ಡ್ರಾಪ್ ಕೊಡುವುದಾಗಿ ಚಾಸಾ-1ರವರನು ಹತ್ತಿಸಿಕೊಂಡು ಅವರಿಗೆ ಮಾರ್ಗ ಮಧ್ಯೆ ಲಾಂಗ್ ಮತ್ತು ಚಾಕುವನ್ನು ತೋರಿಸಿ ಅವರಿಂದ ಒಂದು ಮೊಬೈಲ್ ಪೋನ್ ಮತ್ತು ರೂ.2,500/- ಗಳನ್ನು ಸುಲಿಗೆ ಮಾಡಿರುವುದಾಗಿ ಆರೋಪಿತರ ಒಪ್ಪಿ ಹೇಳಿಕೆ ನೀಡಿರುತ್ತಾರೆ. ನಂತರ ಸದರಿ ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ಪಡೆದುಕಡತಕ್ಕೆ ಅಸವಡಿಸಿಕೊಂಡಿರುತ್ತೇನೆ.

ನಂತರ ಅರೋಪಿತರನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅವರ ಬಳಿ ಇದ್ದ 6 ಮೊಬೈಲ್ ಫೋನ್ ಗಳನ್ನು ಹಾಗೂ 2 ಚಾಕುಗಳು , ಒಂದು ಲಾಂಗನ್ನು ಹಾಗೂ ಅವರ ಬಳಿ ಇದ್ದ ರೂ.14,000/- ನಗದು ಹಣವನ್ನು ಹಾಗೂ ಅವರು ಕೃತ್ಯಕ್ಕೆ ಬಳಸಿದ್ದ ಟಾಟ ಇಂಡಿಕಾ ಕೆಎ-02-ಡಿ-3967 ವಾಹನವನ್ನು ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ ಅಮಾನತ್ತು ಪಡಿಸಿಕೊಂಡ ಮಾಲುಗಳ ಮಾಲು ಪಟ್ಟಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಅನುಮತಿಯನ್ನು ಪಡೆದಿರುತ್ತೇನೆ . ಅ ಕಾಲಕ್ಕೆ ಅಮಾನತ್ತು ಪಂಚನಾಮೆಯನ್ನು ಚಾಸಾ-2 ಮತ್ತು 4 ರವರ ಸಮಕ್ಷಮ ಜರುಗಿಸಿ , ಪಂಚನಾಮಯನ್ನು ತಯಾರು ಮಾಡಿ ಅವರ ಸಹಿಗಳನ್ನು ಪಡೆದಿರುತ್ತೇನೆ. ಆರೋಪಿತರಿಂದ ವಶಪಡಿಸಿಕೊಂಡಂತಹ ಫ್ಯಾನಾ ಸೋನಿಕ್ ಮೊಬೈಲ್ ಚಾಸಾ-1 ರವರಿಗೆ ಸೇರಿದ್ದಾಗಿರುತ್ತದೆ . ನಂತರ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಗಳಲ್ಲಿ ಸ್ಥಳವನ್ನು ತೋರಿಸುವುದಾಗಿ ತಿಳಿಸಿದಂತೆ ಚಾಸಾ-2 ಮತ್ತು 4 ರವರೊಂದಿಗೆ ಆರೋಪಿತರು ಕರೆದುಕೊಂಡು ಹೋದಂತಹ ಸ್ಥಳದಲ್ಲಿ ಪಂಚನಾಮ ಕ್ರಮವನ್ನು ಜರುಗಿಸಿ ಪಂಚನಾಮಯನ್ನು ತಯಾರು ಮಾಡಿ ಪಂಚರ ಸಹಿಯನ್ನು ಪಡೆದಿರುತ್ತೇನೆ. ನಂತರ 4 ಜನ ಆರೋಪಿತರನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ.

ದಿಃ07-04-2017 ರಂದು ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಂತಹ ಇಂಡಿಕಾ ಕಾರಿನ ಮಾಲೀಕಾದ ಚಾಸಾ-7 ಇವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ 1ನೇ

ಆರೋಪಿತನ ಮೊಬೈಲ್ ಸಂಖ್ಯೆ 9741246648 ಹಾಗೂ 2ನೇ ಆರೋಪಿತ ಮೊಬೈಲ್ ಸಂಖ್ಯೆ 9880231881 ಗಳ CAF and CDR ವನ್ನು ಒದಗಿಸಿಕೊಡುವಂತೆ ಜಿಲ್ಲಾ ಪೋಲಿಸ್ ಕಚೇರಿಗೆ ಮನವಿಯನ್ನು ನಿವೇದಿಸಿಕೊಂಡು ಅದೇ ದಿನ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ದಿನಾಂಕ 14-04-2017 ರಂದು ತನಿಖೆಯನ್ನು ಪೂರ್ಣ ಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಆರೋಪಿತರ ವಿರುದ್ದ ದಾಖಲಿಸಿರುತ್ತೇನೆ.

ಈಗ ಸಾಕ್ಷಿಯು ನಿಪಿ.2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 2(ಸಿ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ನಿಪಿ. 3 ಮತ್ತು 4 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 3(ಬಿ ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ ಸ್ಥಳ ಪಂಚನಾಮಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ. 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 5 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತರ ಸ್ವ ಇಚ್ಛಾ ಹೇಳಿಕೆಗಳನ್ನು ನೋಡಿ ಗುರುತಿಸಿದ್ದು ಅದರಲ್ಲಿ ಅರೋಪಿತರು ಅವರ ಜೊತೆಯಲ್ಲಿ ಬಂದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡ ಜಾಗ , ಪ್ರಯಾಣಿಕರನ್ನು ಹೆದರಿಸಿ ಅವರ ಬಳಿ ಹಣ ಮತ್ತು ವಡವೆಗಳನ್ನು ಕಿತ್ತುಕೊಂಡು ಬಿಟ್ಟು ಹೋದ ಜಾಗ ಮತ್ತು ವಡವೆಗಳನ್ನು ಮಾರಾಟ ಮಾಡಿರುವ ಜಾಗಗಳನ್ನು ತೋರಿಸಿ ವಡವೆಗಳನ್ನು ಹಾಜರುಪಡಿಸುತ್ತೇನೆ ಎಂದು ನೀಡಿದ ಹೇಳಿಕೆಯ ಭಾಗವನ್ನು ನಿಪಿ.6 ರಿಂದ 9 ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ CDR ಗಳನ್ನು ನೋಡಿ ಗುರುತಿಸಿದ್ದು ನಿಪಿ.10 ಮತು 11 ಎಂದು ಗುರುತಿಸಲಾಯಿತು. ಸಾಕ್ಷಿಯು ಕಡತದಲ್ಲಿರುವ CAF ನ್ನು ನೋಡಿ ಗುರುತಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು .

ಸಾಕ್ಷಿಯು ಆರೋಪಿತರನ್ನು ನೋಡಿದೆ ಗುರುತಿಸುತೇನೆ ಎಂದು ತಿಳಿಸಿದ್ದು, ಆರೋಪಿತರು ಗೈರು ಹಾಜರಾಗಿದ್ದು ಆರೋಪಿತರ ಪರ ವಕೀಲರು ಅವರ ಗುರುತಿಸುವಿಕೆಗೆ ಆಕ್ಷೇಪಣೆ ಇಲ್ಲವೆಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ.1 ನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿ ನ್ಯಾಯಾಲಯದ ಮುಂದಿರುವ ಒಂದು ಲಾಂಗ್ ಮತ್ತು 2 ಚಾಕುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಮು,ಮಾ,2 ರಿಂದ 4 ಎಂದು ಗುರುತಿಸಲಾಯಿತು. ಸಾಕ್ಷಿಯು (Truasury Box) ಟ್ರೆಜರಿ ಬಾಕ್ಸ ನಲ್ಲಿರುವ ರೂ.6,000/- ( 500 ಮುಖಬೆಲೆಯ 11 ನೋಟುಗಳು ಮತ್ತು 100 ಮುಖ ಬೆಲೆಯ 5 ನೋಟುಗಳು) ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ. 5 ಎಂದು ಗುರುತಿಸಲಾಯಿತು.

ಪಿ.ಆರ್. ಮಾಡುವ ಕಾಲಕ್ಕೆ ರೂ,2,000/- ಮುಖ ಬೆಲೆಯ 4 ನೋಟುಗಳು ನ್ಯಾಯಾಲಯವು ಪಡೆದಿದ್ದು ಅದನ್ನು ಆರ್.ಬಿ.ಐ. ಗೆ ಕಳುಹಿಸಿ ಕೊಟ್ಟಿದ್ದು ಅವುಗಳು ಈಗ ಇರುವುದಿಲ್ಲ. ಸಾಕ್ಷಿಯು ಸದರಿ ನೋಟುಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲು : 1ನೇ ಆರೋಪಿತನ ಪರ ಶ್ರೀ ಎಂ ಕೆ ವೈ ರಿಂದ :-**

ಘಟನೆ ನೆಡೆಯಿತು ಎಂದು ಹೇಳುವ ಸ್ಥಳವು ಬೀದರ್ ನಿಂದ ಶ್ರೀರಂಗಪಟ್ಟಣಕ್ಕೆ ಹೋಗುವ ರಾ.ಹೆ. ಆಗಿರುತ್ತದೆ . ಕ. ಬಿ. ಕ್ರಾಸ್ ಸರ್ಕಲ್ ಹಲವಾರು ತಾಲ್ಲೂಕು ಮತ್ತು ಜಿಲ್ಲೆಗಳಿಗೆ ಸಂಪರ್ಕಿಸುವ ಸರ್ಕಲ್ ಅಗಿರುತ್ತದೆ ಎಂದರೆ ಸರಿ . ಅಲ್ಲಿ ಪೆಟ್ರೋಲ್ ಬಂಕ್ , ಮಳಿಗೆಗಳು , ಆಸ್ಪತ್ರೆ, ಕೆ.ಎಂ.ಎಫ್ ಡೈರಿ ಮತ್ತು ಮನೆಗಳು ಇವೆ ಎಂದರೆ ಸರಿ . ಕೆ.ಬಿ.ಕ್ರಾಸ್ ನಲ್ಲಿ ಆ ಕಾಲಕ್ಕೆ ಯಾವುದೇ ಸಿಸಿ ಟಿವಿಗಳು ಇರಲಿಲ್ಲ. ಚಾಸಾ-2 ಮತ್ತು 4ರವನ್ನು ನಾನೇ ಪಂಚನಾಮೆಗ ಕರದುಕೊಂಡು ಹೋಗಿರುತ್ತೇನೆ. ಅವರು ಚಾಸಾ-1 ರವರ ಸ್ನೇಹಿತರು ಎಂದರೆ ಪರಿಚಯಸ್ಥರು ಇರಬಹುದು . ಅವರಿಗೆ ನಾನು ನೋಟೀಸು ನೀಡಿರುವುದಿಲ್ಲ. ನಿಪಿ.2 ಪಂಚನಾಮೆಯನ್ನು ನಮ್ಮ ರೈಟರ್ ಬರೆದಿದ್ದು ಅವರ ಹೆಸರು ಈಗ ನೆನಪಿಲ್ಲ. ಅವರ ಹೆಸರನ್ನು ಸಾಕ್ಷಿಯಾಗಿ ಸೇರಿಸಿರುವುದಿಲ್ಲ. ನಿಪಿ.4 ಪಂಚನಾಮೆಯಲ್ಲಿ ಅಂಕಣ ನಂ. 4 ಮತ್ತು 5 ರಲ್ಲಿ ದಿನಾಂಕ ವ್ಯತ್ಯಾಸ ಇದೆ ಎಂದರೆ ಸರಿ . ಚಾಸಾ-1 ರವರಿಂದ 2500 ಹಣವನ್ನು ದರೋಡೆ

ಮಾಡಿರುತಾರೆ ಎಂದು ಪಿರಾದು ಇದ್ದು ನಾವು ಪಿ ಎಫ್ ನ್ನು ರೂ.14,000/-ಗೆ ಸಲ್ಲಿಸಿರುತ್ತೇವೆ. ಪಿ ಎಫ್ ನಲ್ಲಿ ನಿಖರವಾಗಿ 2500/- ನ್ನು ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಸದರಿ ರೂ.14000/- ಗಳಲ್ಲಿ ರೂ,2500/- ಗಳನ್ನು ಹೊರತು ಪಡಿಸಿ ಬೇರೆ ಹಣವು ಯಾರಿಗೆ ಸೇರಿದ್ದು ಎಂದು ತನಿಖೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಆರೋಪಿತರು ಬೇರೆ ಪ್ರಕರಣದಲ್ಲಿ ಸುಲಿಗೆ ಮಾಡಿರುವ ಹಣ ವಾಗಿರುತ್ತದೆ ಎಂದು ನುಡಿಯುತ್ತಾರೆ. ಉಳಿದ ಹಣಕ್ಕೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲಎಂದರೆ ಸ ರಿ . ನಾನು CDR report ನ್ನು ಪಡೆದಿದ್ದು CEN ಪೋಲಿಸ ರವರನು ಸಾಕ್ಷಿದಾರರಾಗಿ ಮಾಡಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆಗ CEN ಪೋಲಿಸ ಇರಲಿಲ್ಲ ಎಂದು ನುಡಿಯುತ್ತಾರೆ. CDR report ನ್ನು ನೀಡಿದ ಎಕ್ಸಪೋರ್ಟ ರವರನ್ನು ಸಾಕ್ಷಿಯಾಗಿ ಸೇರಿಸಿರುವುದಿಲ್ಲ. ನಿಪಿ10 ಮತ್ತು 11 CDR report ನಂತರ ಘಟನೆಯಾಯಿತು ಎಂದು ಹೇಳುವ ಸ್ಥಳದ ಯಾವುದೇ ಟವರ್ ಲೋಕೇಷನ್ ನಮೂದು ಆಗಿರುವುದಿಲ್ಲ ಎಂದರೆ ಸರಿ . CDR report ನಲ್ಲಿರುವ ಎಲ್ಲಾ ಟವರ್ ತುಮಕೂರು ನಗರಕ್ಕೆ ಸೇರಿದ ಟವರ್ ಲೊಕೇಷನ್ ಇರುತ್ತದೆ ಎಂದರೆ ಸರಿಯಲ್ಲ. ನಿಪಿ.10 ಮತ್ತು 11 CDR report ನಲ್ಲಿ ನಮೂದಾಗಿರುವ ಹಲವಾರು ವ್ಯಕ್ತಿ ಗಳನ್ನು ನಾನು ವಿಚಾರಣೆ ಮಾಡಿರುವುದಿಲ್ಲ. ದಿನಾಂಕ 01-02-2017 ರಿಂದ 21-03-2017 ರವರೆಗೆ CDR report ನ್ನು ನಿಪಿ.10 ರಂತೆ ದಾಖಲುಮಾಡಿರುತ್ತೇನೆ. ಸದರಿ ಕಾಲದಲ್ಲಿ ಆರೋಪಿತರು ತಿಪಟೂರಿನಲ್ಲಿ ಇದಿದ್ದಲ್ಲಿ ಅದರಲ್ಲಿನಮೂದಾಗುತ್ತಿತ್ತು ಎಂದರೆ ಸರಿಯಿಲ್ಲ.

ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದಇಲ್ಲ , ನಮ್ಮ ಇಲಾಖಾ ಅಂಕಿ ಸಂಖ್ಯೆಗಳಿಗೋಸ್ಕರ ಆರೋಪಿತರ ವಿರುದ್ದ ಸುಳ್ಳು ಸಾಕ್ಷಾ ಧಾರಗಳನ್ನು ಸೃಷ್ಟಿಸಿ ಸುಳ್ಳು ಅಂತಿಮ ವರದಿಯನ್ನು ದಾಹಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ- 2 ರಿಂದ4 ಮತುತ7 ರವರ ಹೇಳಿಕೆಗಳನ್ನು ಪಡೆದಿಲ್ಲಎಂದರೆ ಸರಿಯಲ್ಲ. ನಾನು ಯಾವುದೇ ಸ್ಥಳಕ್ಕೆ ಹೋಗಿ ಪಂಚಾಮೆಯನ್ನು ಜರುಗಿಸಿರುವುಲ್ಲ ಹಾಗೂ ಅರೋತಪಿರ ಯಾವುದೇ ಸ್ವ ಇಚ್ಚಾ ಹೇಳಿಕೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**CC. No. 748/2017** **PW – 6**

**<u>ವಾಟೀ ಸವಾಲು : 2ನೇ ಆರೋಪಿತನ ಪರ ಶ್ರೀ ಎಂ ಬಿ ಕೆ ರಿಂದ</u> :-**

ಕಿಬ್ಬನಹಳ್ಳಿ ಕ್ರಾಸ್ ನಿಂದ ಘಟನೆಯಾಯಿತು ಎಂದು ಹೇಳುವ ಸ್ಥಳಕ್ಕೆ 10 ನಿಮಿಷ ಆಗುತ್ತದೆ . ಆದೇ ರೀತಿ ಪುನಃ ವಾಪಾಸ್ಸು ಬರಲು 10 ನಿಮಿಷ ಅಗುತ್ತದೆ. ನಿಪಿ.6 ದೂರಿನಂತೆ 11.15 ನಿಮಿಷಕ್ಕೆ ಚಾಸ—1 ರವರು ಕಾರನ್ನು ಹತ್ತಿದ್ದರೆ 11.25 ನಿಮಿಷಕ್ಕೆ ಅವರು ಘಟನಾ ಸ್ಥಳದಲ್ಲಿ ಇರಬೇಕಾಗಿತ್ತು ಎಂದರೆ ಸರಿ . ನಿಪಿ.11 ರ ಪ್ರಕಾರ 2ನೇ ಆರೋಪಿತನ ಟವರ್ ಲೋಕೇಷನ್ 11.29 ಕ್ಕೆ ಕಿಬ್ಬನಹಳ್ಳಿ ಟವರ್ ಲೊಕೇಷನ್ ಇದೆ ಎಂದರೆ ಸರಿ . 11-15 ರಿಂದ 11-29 ರ ನಡುವೆ ಗೋಡೆಕೆರೆ ಅದ.,ವಾ ಜೆ.ಸಿ. ಪುರ ಟರ್ ಲೊಕೇಷನ್ ನಮೂದು ಆಗಿಲ್ಲ ಎಂದರೆ ಸರಿ . ನಾನು ಠಾಣೆಯಲ್ಲಿಎಲ್ಲಾ ದಾಖಲಾತಿಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ವಾಟೀ ಸವಾಲು : 4ನೇ ಆರೋಪಿತನ ಪರ ಶ್ರೀ ಹೆಚ್ ಎಲ್ ಎಸ್. ರಿಂದ</u> :-**

**ಮೇಲಿನ ಆರೋಪಿತರ ವಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಸಹಿ/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**